ಈ ನಡುವೆ ಕ್ರಾಂತಿಕಾರಿ ಸಮಾಜವಾದಿ ಪೆಟ್ರಶೇವ್‌ಸ್ಕಿ ಸ್ಥಾಪಿಸ ಹೊರಟಿದ್ದ ಗುಪ್ತ ಕ್ರಾಂತಿಕಾರಿ ಸಂಘಟನೆಯ ಜೊತಗಿದ್ದ ಆರೋಪದ ಮೇಲೆ ಬಂಧನಕ್ಕೊಳಗಾಗುತ್ತಾನೆ. ವಿಚಾರಣೆ ನಡೆದು ಆ ಇಡೀ ಗುಂಪಿಗೆ ಮರಣದಂಡನೆಯನ್ನು ವಿಧಿಸಲಾಗುತ್ತದೆ. ಆಗ ದಾಸ್ತೋವ್‌ಸ್ಕಿಗೆ ಕೇವಲ ಇಪ್ಪತ್ತೆಂಟು ವರ್ಷ. ಅದೊಂದು ದಿನ ಅಪರಾಧಿಗಳನ್ನೆಲ್ಲಾ ಸಾಲಿಗೆ ನಿಲ್ಲಿಸಿ ಗುಂಡಿಕ್ಕಲು ತಯಾರಿ ನಡೆದಿರುತ್ತದೆ. ಆ ಕ್ಷಣದಲ್ಲಿ ಲೇಖಕ ಅನುಭವಿಸಿದ ತಲ್ಲಣಗಳು ಮುಂದಿನ ಅವನ ಇಡೀ ಬರವಣಿಗೆಯ ಮೇಲೆ ವಿಚಿತ್ರ ಪರಿಣಾಮವನ್ನುಂಟು ಮಾಡಿವೆ. ಅಪರಾಧ ಮತ್ತು ಶಿಕ್ಷೆಯ ಸನ್ನಿವೇಶಗಳು ಅದರಿಂದಾಗುವ ಮಾನಸಿಕ ತೊಳಲಾಟಗಳು ದಾಸ್ತೋವ್‌ಸ್ಕಿಯ ಬರವಣಿಗೆಗಳಲ್ಲಿ ಮತ್ತೆಮತ್ತೆ ಕಾಣಿಸಿಕೊಳ್ಳುವುದರ ಹಿನ್ನೆಲೆ ಇದು. ಸಾಕ್ಷಾತ್ ಸಾವಿನ ಭಯದ ಎದುರು ನಿಂತು ತಲ್ಲಣಿಸುತ್ತಿರುವಾಗ, ಇನ್ನೇನು ತಮ್ಮ ಎದೆಗೆ ಗುಂಡು ತಾಗಿ ಅದು ಎದೆಯನ್ನು ಸೀಳಿ ಬಿಡುತ್ತದೆ ಅಂದುಕೊಳ್ಳುತ್ತಿರುವಾಗ ತ್ಸಾರ್ ಹೊರಡಿಸಿದ ಆಜ್ಞೆಯೊಂದನ್ನು ಓದಲಾಗುತ್ತದೆ. ಅದರಲ್ಲಿ ಮರಣದಂಡನೆಯನ್ನು ನಾಲ್ಕು ವರ್ಷಗಳ ಕಠಿಣ ಸಜೆಯನ್ನಾಗಿ ಪರಿವರ್ತಿಸಲಾಗಿರುತ್ತದೆ. ಅಲ್ಲಿಂದ ಆ ನಾಲ್ಕು ವರ್ಷಗಳ ಕಠಿಣ ಸಜೆಯನ್ನು ದಾಸ್ತೋವ್‌ಸ್ಕಿ ಸೈಬೀರಿಯಾದ ನರಕವೆಂದೇ ಖ್ಯಾತಿಪಡೆದಿದ್ದ ಪೆಟ್ರೆಪ್ರವ್ಲೊಸ್ಕ್ ಎಂಬ ಕೋಟೆಯಲ್ಲಿ ಕಳೆಯಬೇಕಾಗುತ್ತದೆ. ಅದು ಎಷ್ಟು ದಾರುಣವಾಗಿತ್ತೆಂದರೆ, ಆ ನಾಲ್ಕೂ ವರ್ಷ ಅವನಿಗೆ ಹಾಕಿದ್ದ ಬೇಡಿಗಳನ್ನು ಬಿಚ್ಚಿರಲಿಲ್ಲವಂತೆ. ಅದನ್ನು ಅನುಭವಿಸಿ ಆಚೆ ಬಂದರೂ ನೇರವಾಗಿ ತಾಯ್ನಾಡಿಗೆ ಹೋಗುವಂತಿರಲಿಲ್ಲ. ಹಾಗಾಗಿ ಅಲ್ಲಿಯೇ ಸೈನಿಕ ವೃತ್ತಿಗೆ ಸೇರಿಕೊಳ್ಳಬೇಕಾಗುತ್ತದೆ. ಆಗಿನ ಸೆರೆಮನೆಯ ಭಯಾನಕ ಅನುಭವಗಳೇ ಮುಂದೆ 'ನೋಟ್ಸ್ ಫ್ರಂ ಅಂಡರ್‌ವರ್ಡ್'ನಲ್ಲಿ ದಾಖಲಾಗಿವೆ. ಅಲ್ಲಿ ಬರುವ ಪಾತಕ ಕೃತ್ಯಗಳು, ಕೊಲೆ, ಆತ್ಮಹತ್ಯೆಯಂತಹ ಸಂಗತಿಗಳು ದಾಸ್ತೋವ್‌ಸ್ಕಿಯ ಎದೆಯನ್ನು ಕಲಕಿಬಿಟ್ಟಿರುತ್ತವೆ. ಮನುಕುಲದ ಮೇಲಿನ ಕ್ರೌರ್ಯ, ಮನೋವಿಕಾರ, ತ್ಸಾರ್‌ನ ನಿರಂಕುಶ ಆಡಳಿತ ದಾಸ್ತೋವ್‌ಸ್ಕಿಯನ್ನು ನಿರಂತರ ಕಾಡುತ್ತಲೇ ಬರುತ್ತವೆ. 1859ರಲ್ಲಿ ಮರಳಿ ಪೀಟರ್ಸ್‌ಬರ್ಗ್‌ಗೆ ಮರಳಿದಾಗಲೂ, ತಾನು ಲೇಖಕನಾಗಿ ಯಶಸ್ಸಿನ ತುತ್ತ ತುದಿಯಲ್ಲಿದ್ದಾಗಲೂ ಹಣಕಾಸಿನ ತೊಂದರೆಗಳು, ಉಲ್ಬಣಗೊಂಡಿದ್ದ ಮೂರ್ಛೆ ರೋಗ ಹಾಗೂ ನಿಗ್ರಹಿಲಾರದಂಥ ಉನ್ಮಾದದ ಬಾಧೆಗೆ ತತ್ತರಿಸಿಹೋಗುತ್ತಾನೆ. ಆದರೆ, ಈ ಎಲ್ಲಾ ಸಂಗತಿಗಳೂ ಅವನ ಸೃಜನಶೀಲ ಬದುಕಿಗೆ ಮುಳುವಾಗುವುದರ ಬದಲು ಪೂರಕವಾಗಿ ಒದಗಿ ಬಂದು ಇವುಗಳನ್ನೆಲ್ಲ ತನ್ನ ಕಥನಗಳಲ್ಲಿ ಅಮರವಾಗಿಸಿದ್ದಾನೆ. ಹೀಗೆ ದಾಸ್ತೋವ್‌ಸ್ಕಿಯಂಥ ಕೆಲವೇ ಕೆಲವು ಶ್ರೇಷ್ಠ ಲೇಖಕರಲ್ಲಿ ಮಾತ್ರ ವೈಯಕ್ತಿಕ ಬದುಕಿನ ಏರಿಳಿತಗಳು, ಸುಖ ದುಃಖಗಳು, ದೈಹಿಕ ಹಾಗೂ ಮಾನಸಿಕ ತೊಳಲಾಟಗಳು, ಕಂಡ ಕನಸುಗಳು, ಛಿದ್ರಗೊಂಡ ಬದುಕು ಸೃಜನಶೀಲತೆಯ ಒರತೆಯಲ್ಲಿ ಲಕಲಕಿಸುತ್ತವೆ. ಹಾಗಾಗಿ ದಾಸ್ತೋವ್‌ಸ್ಕಿಯ ಬರಹಗಳು 'ಸ್ವಮರುಕ'ದಿಂದ ಮುಕ್ತವಾಗಿವೆ ಅಂತಲೇ ಹೇಳಬಹುದು.

'ಕರಮಜೋವ್ ಬ್ರದರ್ಸ್' ಸರಳ ಓದಿಗೆ ಅಪ್ಪ ಮಕ್ಕಳ ಕಥಾನಕದಂತೆ ಕಂಡರೂ ಒಳ ಇಳಿದಂತೆಲ್ಲಾ ಅದು ಬಿಚ್ಚಿಡುವ ಲೋಕ ದಂಗು ಬಡಿಸುತ್ತದೆ. ಸಾಧಾರಣ ಅಪ್ಪ ಮಕ್ಕಳ ಕಥೆಯನ್ನು ಹೇಳುತ್ತಲೇ ದೇವರು, ಜಡ್ಡುಗಟ್ಟಿದ ಧರ್ಮ, ಚರ್ಚ್, ಅದರೊಳಗಿನ ಕಚ್ಚಾಟಗಳು, ಕೊಲೆ, ಮನಷ್ಯನೊಳಗಿನ ಕೇಡು, ಸದ್ಗುಣ, ಕಾಮ, ಪ್ರೇಮ, ದುರಾಸೆ, ನೈತಿಕತೆ—ಅನೈತಿಕತೆಗಳ ನಡುವಿನ ವಾಗ್ವಾದಗಳು, ಅಪರಾಧಿ ಪ್ರಜ್ಞೆ, ಹೆಪ್ಪುಗಟ್ಟಿದ ಮಾನವೀಯ ಸಂಬಂಧಗಳು, ನ್ಯಾಯಿಕ ವ್ಯವಸ್ಥೆ, ಜೂಜು, ವಿಧಿಯಾಟದ ಬಗೆಗಿನ ನಂಬಿಕೆ ಮುಂತಾದವುಗಳ ಮೂಲಕ ಒಂದು ಕಾಲಘಟ್ಟದ ಮನುಕುಲದ ಕಥೆಯನ್ನು ಕಟ್ಟಿಕೊಡುತ್ತದೆ. ಅಂತೆಯೇ ಕೆಲವೊಮ್ಮೆ ನಂಬಿಕೆಗಳ ಬುಡವೇ ಅಲುಗಾಡುತ್ತಾ ಅನಿರೀಕ್ಷಿತ ತಿರುವುಗಳ ಮೂಲಕ ಮುಖಾಮುಖಿಯಾಗುವ ಬದುಕಿನ ವಾಸ್ತವ